Reg. No. | | | | | | | | | |

# BSCKAL 253/FNDKAL 253/HRDKAL 253

**ಗುಣಾಂಕ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಎಸ್ಸಿ./ಬಿ.ಎಸ್ಸಿ.(ಎಫ್.ಎನ್.ಡಿ.)/ಬಿ.ಎ. (ಎಚ್.ಆರ್.ಡಿ.) ಪರೀಕ್ಷೆ, ಮೇ/ಜೂನ್ 2016**

**(2014-15 Batch Onwards)**

**ಕನ್ನಡ ಭಾಷೆ**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

**ಭಾಗ – 1**

**(ಕಾವ್ಯ)**

I. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

1) ಅರ್ಜುನ ಸುಪ್ರತೀಕ ಗಜವನ್ನು ಕೊಲ್ಲಲು ಕಾರಣವೇನು ? ವಿವರಿಸಿ.

2) ನೊಂದವರ ಆಶಾವಾದ ಅಂಬೇಡ್ಕರ್ ಅವರ ಅಗಲಿಕೆಗೆ ಚೆನ್ನಣ್ಣವಾಲೀಕಾರ ಪ್ರತಿಕ್ರಿಯಿಸಿದ ಬಗೆ ಹೇಗೆ ?

ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×5=5)**

1) 'ಪ್ರೀತಿ ಇಲ್ಲದ ಮೇಲೆ' ಕವನದ ಆಶಯವನ್ನು ತಿಳಿಸಿ.

2) 'ಕುಂಬಾರಕಿ ಈಕಿ ಕುಂಬಾರಕಿ' ಕವನದ ಸಂದೇಶವೇನು ?

ಇ) **ಒಂದು** ಪ್ರಶ್ನೆಗೆ ಟಿಪ್ಪಣಿ ಬರೆಯಿರಿ : **(1×3=3)**

1) ಎಂ. ಗೋವಿಂದ ಪೈ

2) ಬಾಣಾಸುರ.

II. ಅ) **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಕಾವ್ಯ ಸಂದರ್ಭದಲ್ಲಿ ಆ ಭಾಗದ ಮಹತ್ವ ವಿವೇಚಿಸಿ : **(1×4=4)**

1) ಜಗದ ನಿಡುನಿದ್ರೆಯಲಿ ಮೋಹರ
ದೆಗೆದ ಮುಗಿಲೋ ಮೇಣಖಿಳ ಕುಲ
ದಿಗಿಭವೆಂಟೊಂದಾಯ್ತೊ ಕೈಕಾಲ್ ಮೂಡಿತೋ ನಭಕೆ
ಅಗಿದು ಮೆಟ್ಟಿದಡವನಿ ಪಡುವಲು
ನೆಗೆದುದಡರಿದು ಮುಂದೆ ಮೆಟ್ಟಲು
ಚಿಗಿದುದಿಳೆ ಮೂಡಲು ಮಹಾಗಜ ವೈದಿತಾಹವವ

P.T.O.

2) ಎಳೆ ಹಸುಳೆಯ ತಾಯಂದಿರು

ಹಾಲುಣಿಸಲು ಹಂಬಲಿಸಿದರೆ

ನಾಳಿನ ಪಾಳಿಯ ಸೂರಿಲ್ಲ

ಸೋರಿಹೋಗುವ ಎದೆಹಾಲು

ಬೆಳ್ಳನೆ ಲೇಸ್‌ಗಳಾಗಿ

ಕತ್ತಸುತ್ತ ಚಲುವ ಬಲೆಯಾಗಿಸುತ್ತಾಳೆ

ದಿನದ ಟಾರ್ಗೆಟ್ ಮುಗಿಸಿ

ನಿಟ್ಟುಸಿರಿಡಲು ಕಾತರಿಸುತ್ತಾಳೆ.

ಆ) **ಎರಡು** ಸಾಲಿನ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿ : **(2×3=6)**

1) ಅಹುದಿಂದು ಪ್ರಾಣಕಾಂತನ ಚಿತ್ರವ ಕಂಡೆ.

2) ಅನ್ಯರಂ ರಕ್ಷಿಸಿದಿವಂ ತನ್ನ ತಾನೆ ರಕ್ಷಿಸಲಾರನಾದನೆ ?

3) ಸಿಡಿಗುಂಡುಗಳ ಕದನ ನಿಂತೀತು ಹೇಗೆ ?

III. **ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ :** **(4×1=4)**

1) 'ಕರ್ನಾಟಕ ಭಾರತ ಕಥಾಮಂಜರಿ' ಯನ್ನು ಯಾವ ಷಟ್ಪದಿಯಲ್ಲಿ ಬರೆಯಲಾಗಿದೆ ?

2) 'ಗಿಳಿವಿಂಡು' ಇದರ ಕರ್ತೃ ಯಾರು ?

3) ಕಪ್ಪು ಜನತೆಯ ಸೂರ್ಯನೆಂದು ಕವಿ ಯಾರನ್ನು ಹೇಳಿದ್ದಾರೆ ?

4) ಜಿ.ಎಸ್. ಶಿವರುದ್ರಪ್ಪ ಇವರ ಪೂರ್ತಿ ಹೆಸರೇನು ?

## ಭಾಗ – 2

## (ಗದ್ಯ)

IV. ಅ) **ಒಂದು ಪ್ರಶ್ನೆಗೆ ಉತ್ತರಿಸಿ :** **(1×8=8)**

1) ರಮಾಳು ಹುಟ್ಟಿದ ಮೇಲೆ ಲೇಖಕರಲ್ಲಿ ಆದ ಬದಲಾವಣೆ ಏನು ? ವಿಶದಪಡಿಸಿ.

2) ಮಹಿಳಾ ಮೀಸಲಾತಿಯ ಅಗತ್ಯದ ಹಿನ್ನೆಲೆಯಲ್ಲಿ ಕಂಡು ಬರುವ ಚಾರಿತ್ರಿಕ ಹಾಗೂ ವರ್ತಮಾನದ ವೈರುಧ್ಯಗಳನ್ನು ವಿವರಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×5=5)**

1) ತಂತ್ರಜ್ಞಾನದ ಆವಿಷ್ಕಾರಗಳು ಪರಿಸರಕ್ಕೆ ಮಾರಕವಾಗುವ ಅಪಾಯಗಳ ಬಗ್ಗೆ ನಾಗೇಶ ಹೆಗಡೆಯವರ ಅಭಿಪ್ರಾಯಗಳನ್ನು ತಿಳಿಸಿ.

2) 'ದೋಸೆ ಮತ್ತು ವಿಜ್ಞಾನ' ಪ್ರಬಂಧದಲ್ಲಿ ವ್ಯಕ್ತವಾಗಿರುವ ವಿಚಾರಗಳೇನು ?

ಇ) **ಒಂದು** ಪ್ರಶ್ನೆಗೆ ಟಿಪ್ಪಣಿ ಬರೆಯಿರಿ : **(1×3=3)**

1) ಗೌತಮನಿಂದ ಜನರು ಆಕರ್ಷಿತರಾದ ಸನ್ನಿವೇಶದ ಬಗ್ಗೆ ಬರೆಯಿರಿ.

2) ಡಾ. ಎಚ್.ಎಸ್. ಅನುಪಮ.

V. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿ : **(4×1=4)**

1) 'ಅಕ್ಕ' ಕಾದಂಬರಿಕಾರ ಯಾರು ?

2) 'ಇರುವುದೊಂದೇ ಭೂಮಿ' – ಕರ್ತೃ ಯಾರು ?

3) ದೇವನೂರು ಮಹಾದೇವ ಮೀಸಲಾತಿಗಾಗಿ ಬಳಸಿದ ರೂಪಕದ ಹೆಸರೇನು ?

4) ಹಾ.ಮಾ. ನಾಯಕರ ಪೂರ್ತಿ ಹೆಸರೇನು ?

## ಭಾಗ – 3

## (ಕ್ರಿಯಾತ್ಮಕ ಕನ್ನಡ)

VI. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **(2×4=8)**

1) ಪ್ರಮುಖ ವಿದ್ಯುನ್ಮಾನ ಮಾಧ್ಯಮಗಳು ಮತ್ತು ಅವುಗಳ ಸ್ವರೂಪದ ಕುರಿತು ವಿವರಿಸಿ.

2) ಅಂತರ್ಜಾಲ ಎಂದರೇನು ? ಅದನ್ನು ಬಳಸಲು ಬೇಕಾದ ಸಾಧನಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

3) ದೇಶದ ಅಭಿವೃದ್ಧಿಯಲ್ಲಿ ದೂರದರ್ಶನದ ಪಾತ್ರವೇನು ?

VII. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿ : **(2×1=2)**

1) ವಿಜ್ಞಾನ ಬರವಣಿಗೆ – ಲೇಖನದ ಕರ್ತೃ ಯಾರು ?

2) ಬ್ಲಾಗರ್ ಎಂದರೆ ಯಾರು ?

## ಭಾಗ – 4

## (ಮಹಾಕಾವ್ಯ)

VIII. ಅ) ಒಂದು ಪ್ರಶ್ನೆಗೆ ಉತ್ತರಿಸಿ : (1×8=8)

1) ರಾಮಾಯಣದಲ್ಲಿ ಅನಾದರಕ್ಕೆ ಒಳಗಾದ ಊರ್ಮಿಳೆಯನ್ನು ಕವಿ ಕುವೆಂಪು ಚಿತ್ರಿಸಿರುವ ಬಗೆ ಹೇಗೆ ? ವಿವರಿಸಿ.

2) ಶ್ರೀರಾಮಚಂದ್ರನು ವನವಾಸಕ್ಕೆ ತೆರಳಿದ ಸಂದರ್ಭವನ್ನು ವಿವರಿಸಿರಿ.

ಆ) ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ : (2×4=8)

1) ಕೌಸಲ್ಯೆ ರಾಮನನ್ನು ವನವಾಸಕ್ಕೆ ಹಾರೈಸಿ ಕಳುಹಿಸಿದ ಸನ್ನಿವೇಶವನ್ನು ಕುರಿತು ಬರೆಯಿರಿ.

2) ಸೀತಾರಾಮರ ಸಂವಾದ.

3) ಸುಮಂತ್ರ.

IX. ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : (4×1=4)

1) ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ ?

2) ಊರ್ಮಿಳೇಶನೆಂದರೆ ಯಾರು ?

3) ಗುಹ ಯಾರು ?

4) "ಪತಿಸೇವೆಗಿಂ ಮಿಗಿಲ್ ಸೇವೆಯಿಲ್ಲಂಗನೆಗೆ" ಎಂದು ಹೇಳಿದವರು ಯಾರು ?

---